

ಬೆಂಗಳೂರಿನ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಸಂಸ್ಥೆಯಲ್ಲಿ ಡಿಜಿಟಲ್ ಸಬ್‌ಸ್ಟ್ರಾಕ್ಷನ್ ಆ್ಯಂಜಿಯೊಗ್ರಾಂ ಚಿತ್ರ: ರಂಜು ಪಿ.

ಎನ್ನಬೇಕು.

ವ್ಯಕ್ತಿಗೆ ಕಾಯಿಲೆ ಬರಲು ವಯಸ್ಸಿನ ನಿರ್ಬಂಧವಿಲ್ಲ. ಹೃದ್ರೋಗವೇ ಆಗಿರಬಹುದು, ಮೆದುಳಿನ ಸಮಸ್ಯೆ, ಮಾನಸಿಕ ಕಾಯಿಲೆಗಳು, ಥೈರಾಯ್ಡ್ ಸಮಸ್ಯೆ, ಕಿಡ್ನಿ ತೊಂದರೆ, ತಲಸ್ಸೇಮಿಯಾ, ಅನೀಮಿಯಗಳಂತಹ ರಕ್ತದ ತೊಂದರೆಯಿಂದ ಬರುವ ಕಾಯಿಲೆಗಳು.. ಅಷ್ಟೇ ಏಕೆ ಮಧುಮೇಹ, ರಕ್ತದೊತ್ತಡ, ಅತಿಬೊಜ್ಜು, ಕೊಲೆಸ್ಟ್ರಾಲ್‌ಗಳಂತಹ ಜೀವನಶೈಲಿ ಕಾಯಿಲೆಗಳು ಇಂದು ಮಕ್ಕಳಿಂದ ಹಿಡಿದು ವೃದ್ಧರವರೆಗೂ ಎಲ್ಲ ವಯಸ್ಸಿನವರನ್ನೂ ಬಾಧಿಸುತ್ತಿವೆ.

ಇಂದಿನ ವೇಗದ ಜೀವನಶೈಲಿಯಲ್ಲಿ ಹೃದಯಾಘಾತವಾಗಲು ವಯಸ್ಸಿನ ನಿರ್ಬಂಧವಿಲ್ಲ. ಹಿಂದೆ ಪ್ರಾಣಾಂತಿಕ ಎಂದು ಭಯಪಡುತ್ತಿದ್ದ ಈ ಸಮಸ್ಯೆ ಇಂದು ಚಿಕ್ಕ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಯಾವ  ವಯಸ್ಸಿನಲ್ಲಾದರೂ ಬರುತ್ತದೆ. ಎಷ್ಟೋ ಮಂದಿಗೆ ಎದೆನೋವು ಬಂದು ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿಕೊಳ್ಳುವವರೆಗೂ ಅದು ಹೃದಯಾಘಾತ ಎಂಬ ಅರಿವೇ ಇರುವುದಿಲ್ಲ. ಎದೆ ಮಧ್ಯ ಭಾಗದಲ್ಲಿ ಹಿಡ್ಕೊಂಡ ಹಾಗೆ ಆಗುತ್ತೆ, ಬೆವರು ಬರುತ್ತದೆ, ಕುಸಿದು ಬೀಳ್ತಾರೆ..!  ವೈದ್ಯಕೀಯ ವಲಯದ ತಜ್ಞರೂ ಕಳವಳ ಪಡುವ ಸಂಗತಿ ಎಂದರೆ 20 ವರ್ಷದ ಆರೋಗ್ಯವಂತನಾಗಿಯೇ ಇರುವ ಕಟ್ಟುಮಸ್ತಾದ ಯುವಕನೂ ಹೃದಯಾಘಾತ ಎಂದು ಆಸ್ಪತ್ರೆಗೆ ದಾಖಲಾಗುವುದು! ಯಾವ ಕಾರಣಕ್ಕೆ ಹೀಗೆ ಆಗಿದೆ ಎಂದು ಕಂಡು ಹಿಡಿದು ಹಲವು ಪರೀಕ್ಷೆಗಳಿಗೆ ಯುವಕ ಒಳಗಾಗಬೇಕಾಗುತ್ತದೆ. ಥೈರಾಯ್ಡ್, ಕೊಲೆಸ್ಟರಾಲ್ ಮುಂತಾದ ಕಾರಣಗಳಿಲ್ಲದೆ, ಧೂಮಪಾನ, ಮದ್ಯಪಾನದಂತಹ ದುಶ್ಚಟಗಳೂ ಇಲ್ಲದೆ ಇರುವವರು ಹೃದಯಾಘಾತಕ್ಕೆ ಒಳಗಾಗುವುದು ವೈದ್ಯರಿಗೂ ಅಚ್ಚರಿ ಹುಟ್ಟಿಸುವ ವಿದ್ಯಮಾನ.

‘ಆನುವಂಶೀಯವಾಗಿಯೂ ಬರುವ ಹೃದಯದ ಕಾಯಿಲೆಯಿಂದ ಮಕ್ಕಳೂ ಬಳಲುತ್ತಾರೆ. ಇದಕ್ಕೆಲ್ಲ ಇಂದಿನ ಜೀವನಶೈಲಿ ಮತ್ತು ಒತ್ತಡದ ಬದುಕೇ ಕಾರಣ. ಇಂಥ ರೋಗಿಗಳಿಗೆ ಇಂಜೆಕ್ಷನ್, ಆ್ಯಂಜಿಯೊಗ್ರಾಮ್ ಮೂಲಕ ರಕ್ತನಾಳಗಳ ತಡೆಯನ್ನು ಪತ್ತೆ ಹಚ್ಚಿ ಮುಂದೆ ಈ ಸಮಸ್ಯೆ ಬರದ ಹಾಗೆ ಮಾಡಬಹುದು. ಈಗ ಹಲವಾರು ಹೊಸ ವೈದ್ಯಕೀಯ ಪರಿಕರಗಳು ಬಂದಿವೆ. ಶಸ್ತ್ರಚಿಕಿತ್ಸೆ ಇಲ್ಲದೆ ಕೇವಲ ಗುಳಿಗೆಯಿಂದಲೇ ಈ ಸಮಸ್ಯೆ ನಿವಾರಿಸುವ ಸಾಧ್ಯತೆಯೂ ಇದೆ. ಇದರ ಸದ್ಬಳಕೆಯನ್ನೂ ಮಾಡುತ್ತಿದ್ದೇವೆ’ ಎನ್ನುತ್ತಾರೆ ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ಕಾರ್ಡಿಯಾಲಜಿಸ್ಟ್ ಡಾ. ಎಚ್.ಎಸ್. ನಟರಾಜ ಶೆಟ್ಟಿ.

‘ಕಳೆದ 10 ವರ್ಷಗಳಿಗೆ ಹೋಲಿಸಿದರೆ ಹೃದ್ರೋಗದಿಂದ ಬಳಲುವವರ ಸಂಖ್ಯೆ ಕರ್ನಾಟಕದಲ್ಲಿ ಗಣನೀಯವಾಗಿ ಹೆಚ್ಚಿದೆ. ಭವಿಷ್ಯದ 10 ವರ್ಷಗಳಲ್ಲಿ ಇದು ಇನ್ನೂ ಹೆಚ್ಚಾಗುವ ಅಪಾಯ ಇದೆ. ಇದಕ್ಕೆ ಪರಿಹಾರವನ್ನು ತಜ್ಞ ವೈದ್ಯರು ಹಲವು ಅಧ್ಯಯನ, ಸಂಶೋಧನೆಗಳ ಮೂಲಕ ಕಂಡು ಹುಡುಕುತ್ತಲೇ ಬಂದಿದ್ದಾರೆ. ಹೊಸ ವೈದ್ಯ ಪರಿಕರವಾಗಿ ಅತ್ಯಾಧುನಿಕ ರೀತಿಯ ಪೇಸ್ ಮೇಕರ್ ಇಂಪ್ಲಾಂಟೇಶನ್ (ಪಿಪಿಐ) ಅಲ್ಲದೆ ಐಸಿಡಿ (ಇಂಟ್ರಾ ಕಾರ್ಡಿಯಾಕ್ ಡಿಫ್ರಾಪ್ರಿಲೇಟರ್) ಬಳಸುತ್ತಿದ್ದೇವೆ. ಇದು ಶೀಘ್ರದಲ್ಲಿ ರೋಗಿ ಗುಣಮುಖನಾಗಲು ಹೃದಯದೊಳಗೆ ಎಲೆಕ್ಟ್ರಿಕ್ ಶಾಕ್ ಕೊಡುವ ವಿಧಾನ. ಹೃದಯದಲ್ಲಿ ರಂಧ್ರ ಇರುವ ಮಕ್ಕಳಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ ಮಾಡದೆಯೇ ಸಂಪೂರ್ಣವಾಗಿ ಗುಣಪಡಿಸುವಂಥ ಸಾಧನಗಳೂ ಬಂದಿವೆ. ಇದನ್ನು 15–20 ನಿಮಿಷಗಳಲ್ಲೇ ಪೂರೈಸಿ ಮಗುವನ್ನು ಮನೆಗೆ ಕಳಿಸಬಹುದು. ವಿಎಸ್‌ಡಿ (ವೆಟ್ರಿಕ್ಯುಲರ್ ಸೆಪ್ಟಲ್ ಡಿಫೆಕ್ಟ್) ಹುಟ್ಟಿದಾಗಿನಿಂದ ಬರುವ ಹೃದಯ ತೊಂದರೆ. ಇದಕ್ಕೆ ಮೊದಲು ಶಸ್ತ್ರಚಿಕಿತ್ಸೆ ಒಂದೇ